# SCCH-04

**ಸಾಕ್ಷಿಯನ್ನು ದಿನಾಂಕಃ 22.02.2025 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು** ಕುಮಾರಿ ಮೋನಿಕಾ 1 ನೇ ಎದುರುದಾರರ ಪರ ವಕೀಲರಿಂದಃ-

ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದ ಅಂಶಗಳಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ರೂ.2 ಕೋಟಿ 50 ಲಕ್ಷದ ಪರಿಹಾರದ ಮೊತ್ತವನ್ನು ಯಾವ ಆಧಾರದ ಮೇಲೆ ಪ್ರಮಾಣಪತ್ರದಲ್ಲಿ ನಮೂದಿಸಲಾಗಿದೆ ಎಂದು ಸೂಚಿಸಿದರೆ ಸಾಕ್ಷಿಯು ವೈದ್ಯಕೀಯ ಬಿಲ್ಲುಗಳ ಆದಾರದ ಮೇಲೆ ಮಾಡಲಾಗಿದೆ ಎಂದು ಉತ್ತರಿಸುತ್ತಾರೆ. ನನ್ನ ಬಳಿ ಲಭ್ಯವಿರುವ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಆಸ್ಪತ್ರೆಯಿಂದ ನೀಡಿರುವ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮಕ್ಕಳ ವಯೋದೃಢೀಕರಣಕ್ಕೆ ಆಧಾರ್ ಕಾರ್ಡ್ ಅನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ16.03.2023 ರ ನಂತರ ನಿರ್ದಿಷ್ಟವಾಗಿ ಯಾವ ದಿನಾಂಕದಂದು ಅಸಲು ಅರ್ಜಿದಾರರಾದ ನನ್ನ ಪತಿ ರಾಜಶೇಖರ್ ರವರನ್ನು ಪುನಃ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದು ನನಗೆ ನೆನಪಿಲ್ಲ. ನಾನು ಸದರಿ ಬಾಬ್ತು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಮಾಲೀಕರ ವಿರುದ್ಧ ಯಾವುದೇ ವಿಮೆ ಕೇಳದೆ ಕೇವಲ ವಿಮಾ ಕಂಪನಿಯ ವಿರುದ್ದ ಮಾತ್ರ ಪರಿಹಾರವನ್ನು ಕೋರುತ್ತೇನೆ ಎಂದರೆ ಸರಿ. ಮಾಸಿಕ ರೂ.1 ಲಕ್ಷ ಹಣವು ವೈದ್ಯಕೀಯ ತಪಾಸಣೆಗೆ ವ್ಯಯ ಆಗುತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಾಬ್ತು ಮಾನ್ಯ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅಸಲು ಅರ್ಜಿದಾರರಾದ ನನ್ನ ಪತಿ ರಾಜಶೇಖರ್ ರವರ 2022 ರಿಂದ ಪ್ರಸಕ್ತ ಸಾಲಿನ ವರೆಗಿನ ಆದಾಯ ತೆರಿಗೆ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಅದೇರೀತಿಯಾಗಿ ನನ್ನ ಆದಾಯ ತೆರಿಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**18 ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**